ರೆಡಿಮೇಡ್ ಫುಡ್ ತರಿಸಿ ತಿನ್ನಬಹುದಲ್ಲ, ಆಮೇಲೆ ನಾವೊಂದಿಷ್ಟು ರೆಸ್ಟ್ ಮಾಡಬಹುದಲ್ಲ ಎಂಬ ಸಿದ್ಧಾಂತದ ಹುಡುಗಿಯರು. 'ಕಲ್ಲು ಬಾವಿ ನೀರ್ ಸೇದ್‌ಲಿಲ್ಲ, ಕಸದ ಮಂಕರಿ ಹೊತ್ತುಕೊಂಡೋಗಿ ತಿಪ್ಪೆಗಾಕ್‌ಲಿಲ್ಲ ರೆಸ್ಟಂತೆ ರೆಸ್ಟು' ಅಮ್ಮನ ಅಂತರಾಳದ ಹೊಗೆಯೊಳಗೆ ಸೊಸೆಯರ ಮ್ಯಾಲೆ ಘಾಟಿಲ್ಲದ ಕೆಮ್ಮು. ಸಲ ಸಲ ಮಾಡುವ ಮಾರ್ನಾಮಿ ಹಬ್ಬಕ್ಕೆ ಅಜ್ಜಿ ಕಳಶಕ್ಕೆ ಅಕ್ಕಿ ಉಯಿದು ಸೀರೆ ಉಡಿಸುವ, ಅಜ್ಜನ ಕಳಶಕ್ಕೆ ರಾಗಿ ಉಯಿದು ಪಂಚೆ ಟವಲ್ಲು ಸುತ್ತುವ, ತೆಂಗಿನ ಹೊಂಬಾಳೆ ಮುಡಿಸಿ ಬೇಕಾದ್ದು ಬ್ಯಾಡವಾದ್ದು ಎಡೆಯಿಕ್ಕಿ ಭಯಬಕುತಿಯಿಂದ ಕಡ್ಡಿ ಬೆಳಗಿ ಕಾಯಿಹೊಡದು ಧೂಪವಾಕಿ ಮಧ್ಯಾಹ್ನದ ಬಿಸಿಲು ನೆತ್ತಿದಾಟಿ ಹಟ್ಟಿಬಯಲಾಚೆ ನಿಲ್ಲುವಾಗ ಉಂಬೋವೊತ್ತಿಗೆ. ಅಮ್ಮನೆದೆಯಲ್ಲಿ ಯಾರೂ ಮಾಡದೇ ಇರೋ ಸಾಧನೆಯನ್ನ ನಾನೊಬ್ಬಳೆ ಸಾಧಿಸಿಬಿಟ್ಟಿದ್ದೀನಿ ಅಂದ್ರೆ. ಪಲ್ಯ ಮಾಡೀನಾ ಪಾಯಸ ಮಾಡೀನಾ ಸಾರು ಕೂಡಿಸೀನಾ ಅನ್ನ ಬಸ್‌ದಿದ್ದೀನಾ ಅಂದರೆ ಅವಳ ಬದುಕಿನ ಪಟ್ಟಿಯೊಳಗೆ ಹಬ್ಬದ ಕೆಲಸಮಾಡಿರುವುದೇ ಘನಂದಾರಿಯಾದದ್ದು ಎಂಬ ಐಸೋಜುಗಕ್ಕೆ ಬೀಳುತ್ತಿದ್ದಳು. ಅಪ್ಪ ಅವನ ಬಂದು ಬಳಗದವರ ನಡುವೆ ಅಲ್ಲಿ ಕೇರಿ ಕೇರಿಯವರನ್ನೆಲ್ಲ ಕರೆದು ಉಂಬಾಕಿಕ್ಕಿಸುವ ಅವನ ಆನಂದವೆಂಬೋದು ಊರಿಗಾಗಿ ಮಿಗಿಲೊವಷ್ಟು. ಅವನ ಕಣ್ಣುಗಳು ಮಿನು ಮಿನುಗಿ ಮೂತಿ ಮ್ಯಾಲಿನ ಬಿಳಿ ಮೀಸೆಯೆಂಬೋದು ಮತ್ತೆ ಮದನಿಂಗನನ್ನಾಗಿ ಮಾಡುತಿತ್ತು. ಇಂತ ಅಪ್ಪನಿಗೆ ಅವನ ಹುಟ್ಟಿದೂರೆಂದರೆ ಊರುಮುಂದಿನ ಅರಳಿಕಟ್ಟೆಯ ಮ್ಯಾಲೆ ಕುಂತುಕೊಂಬುವ ದೊಡ್ಡೀರಣ್ಣ ಮನಿಂದಲಮೈಯ್ಯೂರಿ, ಮ್ಯಾಗಲಟ್ಟಿವೀರಭದ್ರ, ಗುಡಿಗೌಡನೆಂಬೊ ಸಣ್ಣಾಗಪ್ಪ, ಎಲೆಕೊಯ್ಯೊಚಂದ್ರಣ್ಣ ಇಂತಿಂತವರ ಜೊತೆ ಸಭೆ ಸೇರಿ ಅಲ್ಲಿ ಅವನ ಅನುಭವಗಳ ಜೊತಿಗೆ ಇವತ್ತಿನ ರಾಜಕೀಯ ಅರಾಜಕತೆಯನ್ನ, ಜಾತಿಯೆಂಬ ಮೇಲುಕೀಳಿನ ಮೇಲಾಟವನ್ನ ನೀರಿಲ್ಲದೆ ಒಣಗುತ್ತಿರುವ ಕೆರೆ ಕಟ್ಟೆಗಳನ್ನ ಇಲ್ಲ ಆ ವರ್ಷತುಂಬಿ ಕೋಡಿ ಬಿದ್ದರೆ (ನೆಲ್ಲು) ಗದ್ದೆಹೊಡೆಯುವವರ ಸಿದ್ಧತೆಯನ್ನ. ಊಗುಟ್ಟುವವರ ಮುಂದೆ ಮಾತಿಗೆ ಮಾತುಬೆಳಸಿ. ಊಗುಡುದವರ ಮುಂದೆ ಮಾತಿಗೆ ಮಾತು ಮಸೆಯುವ ಗಳಿಗೆಯಲ್ಲಿ ಅರಳಿ ಮರದೆಲೆಗಳು ಇದ್ದು ಇದ್ದು ಇರಲಾರದೆ ಮೈ ಮುರಿಯುತ್ತಿದ್ದರೂ ಇವರೆಲ್ಲರ ಮಾತು ಮಾತ್ರ ಮುಗಿಯುತ್ತಿರಲಿಲ್ಲ.

ಇಂಗೆ ರಿಟೈರ್ಡ ಆದಮೇಲೆ ಊರು ಊರಂತ ಎಲ್ಲಿ ಇಲ್ಲದ ಕಕ್ಕುಲಾತಿಯೊಳಗೆ ಒದ್ದಾಡುತ್ತಿದ್ದ ಅಪ್ಪ ಊರಿಗೊರಡಲು ಮನಸ್ಸಿಗಾಕ್ಕೆಂಡಾಗಲೆಲ್ಲ, ಒಂದುದಿನ ಮುಂಚೆಯೆ ಕ್ಷೌರ ಮಾಡಿಸಿಕೊಂಬಾದೇನು? ಬೀರುವಿನ ಬಟ್ಟೆಗಳ ನಡುವಿನ ಬಟ್ಟೆಗಳನ್ನೆಲ್ಲಾ ಹುಡುಕುಡುಕಿಕೊಂಡು ಇಸ್ತ್ರಿ ಉಜ್ಜಿಸಿಕೊಂಬಾದೇನು, ನೆಟ್ಟಗೆ ಹೊಟ್ಟೆ ತುಂಬ ಉಂಬಲಾರದೆ ತಟ ತಟನೆ ಅವಸರ ಪಡುವುದೇನು? ಯಪ್ಪ ಸ್ವಾಮಿ ಸರಿಯಾಗಿ ಹೊಟ್ಟೆ ತುಂಬಾ ಹಿಟ್ಟುಣ್ಣೊ ಮಾರಾಯ ನಿನ್ನ್‌ಊರು ಎಲ್ಲಿಗೂ ಓಡಿ ಹೋಗಲ್ಲ ಎಂಬ ಅಮ್ಮನ ತಕರಾರಿನಲ್ಲಿ ರಬ ರಬನೆ ಉಂಡವನು, ಮೆಜೆಸ್ಟಿಕ್ಕಿನಲ್ಲಿ ಪಾವಗಡವೆಂಬ ಬೋರ್ಡಿರುವ ಕೆಂಪು ಬಸ್ಸು ಹತ್ತಿದನೆಂದರೆ ಪರಪಂಚವೆಲ್ಲ ಅವನ ಕಾಲಿನಕೆಳಗೆ ಐತೇನೊ ಎಂಬ ಮೋಹವನ್ನ ನೆಲುಮುತ್ತಿರುವವನು. ಊರಿಗೆ ಬಂದು ಬಸ್ಸಿಳಿದವನಿಗೆ ಗಂಡನಿಲ್ಲದ ದೊಡ್ಡಮ್ಮ ಸುಡಾ ಸುಡಾ ಮುದ್ದೆತಿರುವಿ ಅದಕ್ಕೊಪ್ಪುವ ಬಸ್ಸಾರೊ, ಬಜ್ಜಿಯೊ, ಸಪ್ಪೆಸರೊ, ಕೈಗೊಜ್ಜೊ, ಮಾಡಿ ಉಂಬಾಕಿಕ್ಕುತ್ತಿದ್ದಳು.

ಇಂತ ಮನೆದೇವರು ಸಿದ್ದೇಶ್ವರನಿಗೆ ನಡೆದು ಕೊಂಬುವ ನೆಲದ ನೂರಾರು ಭಕ್ತರ ನಡುವೆ ಕುಲೋಸ್ತರುಗಳು ಸೇರಿಕೊಂಡು ಮಾಡಿದ್ದ ಯಜಮಾನಿಕೆಯಲ್ಲಿ ಅಪ್ಪನ ಅಪ್ಪಂದಿರು ತಾತಂದಿರುಗಳು ಆ ದೇವರ ಯಜಮಾನನಿಕೆ ಕಟ್ಟಿಕೊಂಡು ನಡೆಸಿದ ಪರಂಪರೆಯಲ್ಲಿ. ದೇವರ ಜಾತ್ರೆ, ಪೂಜೆ ಫಲಾಹಾರ, ಪಾನಕ, ಅನ್ನ ಸಂತರ್ಪಣೆ, ಇತ್ಯಾದಿ ಕೈಂಕರ್ಯಗಳಿಗೆ ಮುಂದೆ ನಿಂತುಕೊಂಬುವ ಯಜಮಾನಿಕೆಯನ್ನು ಈ ಮೊದಲು ನಮ್ಮ ಎರಡನೆ ದೊಡ್ಡಪ್ಪನಿಗೆ ಕಟ್ಟಿದ್ದರು. ಆದರೆ ಬದುಕು ಬ್ಯಾಸಾಯ ಎಂಬ ಬರಾಟೆಯ ಎದುಸಿರಿನಲ್ಲಿ ದೊಡ್ಡಪ್ಪನಿಗೆ ಹುಟ್ಟಿಕೊಂಡಿದ್ದ ಹೊಟ್ಟೆಯೊಳಗಿನ ಗೆಡ್ಡೆಯೊಂದನ್ನು ತಗೆಸಲು ಮತ್ತು ವಾಸಿಮಾಡಿಸಲು. ದಿಕ್ಕಿಲ್ಲದ ಆಸ್ಪತ್ರೆಗೆ ತೋರ್‌ಸೀರು ಭೇದಿಸಲಾಗದ ಖಾಯಿಲೆಯಲ್ಲಿ ದೊಡ್ಡಪ್ಪನ ಯಜಮಾನಿಕೆಯ ಅವಧಿ ಇದ್ದಂಗೆಯೆ ತೀರಿಕೊಂಡು ಬಿಟ್ಟಿದ್ದ. ಅಂತ ಗಳಿಗೆಯಲ್ಲಿ ಇನ್ನು ನಿಮ್ಮ